ಶತಮಾನದ ನಮನ

# ನಿರಂಜನರಾದ ಕುಳಕುಂದ ಶಿವರಾಯ

15.06.1924 – 13.03.1992



ಸಿದ್ಧಲಿಂಗ ಪಟ್ಟಣಶೆಟ್ಟಿ

1

ಧಾರವಾಡದ ಬಾಸೆಲ್ ಮಿಶನ್ ಹೈಸ್ಕೂಲಿನಲ್ಲಿ ಕಲಿಯುತ್ತಿದ್ದೆ (1953-57). ವೆಂಕಮ್ಮ ಕೊಯಿಮತ್ತೂರ ಅವರ ಸಾಹಿತ್ಯಿಕ ಆಸಕ್ತಿ ಮತ್ತು ಪರಿಶ್ರಮದಿಂದಾಗಿ ಅವರ ಸಂಪಾದಕತ್ವದಲ್ಲಿ, ವನಿತಾ ಸೇವಾ ಸಮಾಜದಿಂದ ಪ್ರಕಟವಾಗುತ್ತಿದ್ದ 'ವೀರಮಾತೆ' ಮಾಸಪತ್ರಿಕೆಯನ್ನು ಎಂಟನೇತ್ತದಲ್ಲಿ ಇದ್ದಾಗಿನಿಂದಲೇ ನಿಯಮಿತವಾಗಿ ಓದುತ್ತಿದ್ದೆ. ಆ ಕಾಲದಿಂದಲೇ ಓದುವ, ಬರೆಯುವ ಹುಚ್ಚು ಹೊಕ್ಕಿತ್ತು. ನನ್ನ ಕೆಲವು ಬರಹಗಳನ್ನು ನಮ್ಮ ಕನ್ನಡ ಶಿಕ್ಷಕರಾಗಿದ್ದ ವರದರಾಜ ಹುಯಿಲಗೋಳ ಸರ್‌ಗೆ ಓದಲು ಕೊಟ್ಟಿದ್ದೆ. ಅವರು, ಕೆಲವನ್ನು ಆಯ್ದು, 'ವೀರಮಾತೆ'ಗೆ ಕೊಡು ಎಂದು ಸಲಹೆಯಿತ್ತರು. ಒಂದು ದಿನ ಸಾಯಂಕಾಲ, ಶಾಲೆ ಬಿಟ್ಟ ಮೇಲೆ, ಧೈರ್ಯದಿಂದ, ನನ್ನ ಕೆಲವು ಬರಹಗಳನ್ನು ಆ ಪತ್ರಿಕೆಯ 'ಬಾಲಬಳಗ'ದಲ್ಲಿ ಪ್ರಕಟಿಸಲು ಕೋರಿ ಕೊಡಲು ಹೋದೆ. ಸಾದಾ ಖಾದಿ ಸೀರೆ ಧರಿಸಿದ್ದ, ಎತ್ತರದ ನಿಲುವಿನ, ನಗುಮುಖದ, ಶಾಂತ ಮುದ್ರೆಯ ವೆಂಕಮ್ಮನವರನ್ನು ಕಂಡು ನಮಸ್ಕರಿಸಿದೆ. ಅವರು ಅಲ್ಲಿಯ ಅನಾಥಾಲಯ, ಹೈಸ್ಕೂಲು, ಪ್ರಾಥಮಿಕ ಶಾಲೆಗಳಲ್ಲಿ ಕಲಿಯುತ್ತಿದ್ದ ಅಸಂಖ್ಯ ಮಕ್ಕಳಿಗಷ್ಟೇ ಅಲ್ಲ, ನನಗೂ ತಾಯಿಯಂತೆ ಕಂಡರು. ಗೇಟ್ ಬದಿಯಲ್ಲಿಯೇ ಇದ್ದ ತಮ್ಮ ಪುಟ್ಟ ಕಚೇರಿ ಕೊಠಡಿಯಲ್ಲಿ ನನ್ನನ್ನು ಅಕ್ಕರೆಯಿಂದ ಕೂಡಿಸಿಕೊಂಡು, ಬಂದ ಉದ್ದೇಶ ಕೇಳಿದರು. 'ಹುಯಿಲಗೋಳ ಸರ್ ಕಳಿಸಿದ್ದಾರೆ, ಈ ಕವನ ನಿಮಗೆ ಕೊಡಲು ಬಂದಿದ್ದೇನೆ' ಅಂದೆ. ಆ ಕಾಗದಗಳ ಮೇಲೆ ಕಣ್ಣಾಡಿಸುತ್ತ, ವೆಂಕಮ್ಮ ಅವರು, ಅಲ್ಲಿಯೇ ನಿಂತಿದ್ದ ಯುವತಿಗೆ, 'ಪ್ರಭಾ, ಇವನ್ನು